ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 30-07-1970.

***<u>ಮಹಾರಥಿ ಎಂದರೆ ಮಹಾನತೆ</u>*** (महारथी अर्थात् महानता)

ಇಂದು ಪಾಂಡವ ಸೇನೆಯ ಭಟ್ಟಿಯ ಸಮಾಪ್ತಿ ಸಮಾರಂಭವೋ ಅಥವಾ ಆರಂಭ ಮಾಡುತ್ತೀರೋ, ಸಮೀಪತೆ ಆರಂಭವಾಗಿದೆಯಾ? ವಿಶೇಷ ಯಾವ ಸುಧಾರಣೆ ಮಾಡಿರುವಿರಿ ಮತ್ತು ಅದಕ್ಕಾಗಿ ಯಾವ ವಿಶೇಷ ಸಂಕಲ್ಪ ಮಾಡಿರುವಿರಿ? ಪರಿವರ್ತನೆ ಶುರುವಾಗಿದೆಯೋ ಅಥವಾ ಆಗುವುದೋ? ಸಂಕಲ್ಪ ರೂಪದಲ್ಲಿದೆಯೋ? ಸಂಸ್ಕಾರ ತುಂಬಿಕೊಂಡಿರುವಿರಾ?' (ಪ್ರತಿಯೊಬ್ಬರೂ ತಮ್ಮ ಅನಿಸಿಕೆ ಹೇಳಿದರು) ಪಾಂಡವ ಸೇನೆಯ ಭಟ್ಟಿಯ ಪೇಪರ್ ಇದಾಗಿದೆ. ಈ ಒಂದು ಪ್ರಶ್ನೆಯಿಂದ ಪೂರ್ಣ ಪೇಪರ್ ಆಯಿತು. ವರ್ತಮಾನ ಸಮಯ ಸಂಕಲ್ಪ ಮತ್ತು ಕರ್ಮ ಜೊತೆಗಿರುವ ಆವಶ್ಯಕತೆಯಿದೆ. ಈಗೀಗ ಸಂಕಲ್ಪ ಮಾಡುವುದು ಈಗೀಗ ಕರ್ಮದಲ್ಲಿ ತರುವುದು. ಸಂಕಲ್ಪ ಮತ್ತು ಕರ್ಮದಲ್ಲಿ ಮಹಾನ್ ಅಂತರವಿರಬಾರದು. ಮಹಾರಥಿಗಳ ಅರ್ಥವೇ ಆಗಿದೆ ಮಹಾನತೆ. ಮಹಾನತೆ ಕೇವಲ ಸಂಕಲ್ಪದಲ್ಲಿ ಅಷ್ಟೇ ಅಲ್ಲ ಎಲ್ಲದರಲ್ಲಿ ಮಹಾನತೆ, ಮಹಾರಥಿಗಳ ಲಕ್ಷಣವಿದಾಗಿದೆ. ಸಂಕಲ್ಪವನ್ನು ಪ್ರಯೋಗದಲ್ಲಿ ತರುವ ವಿಚಾರದಲ್ಲಿ ಸಮಯ ಬೇಕಾಗಿಲ್ಲ ಏಕೆಂದರೆ ಮಹಾರಥಿಗಳ ಸಂಕಲ್ಪಗಳು ಪ್ರಾಯೋಗಿಕವಾಗಿ ಸಂಭವಿಸುತ್ತವೆ. ಇದನ್ನು ಮಾಡುವುದಾ ಬೇಡವಾ, ಹೇಗೆ ಮಾಡುವುದು, ಏನಾಗುವುದು ಎಂದು ಯೋಚಿಸುವ ಆವಶ್ಯಕತೆ ಅವರಿಗೆ ಇರುವುದಿಲ್ಲ. ಈ ರೀತಿ ಸಂಕಲ್ಪ ಬರುತ್ತಲೇ ಸಿದ್ಧಿಯಾಗುವಂತಹ ಸಂಕಲ್ಪವೇ ಉತ್ಪನ್ನವಾಗುವವು.

ಯೋಗದ ಸಿದ್ಧಿಯನ್ನು & ಕರ್ಮದ ಸಿದ್ಧಿಯನ್ನು ಪಡೆಯುವುದೇ ಅಂತಿಮ ಸ್ಥಿತಿಯಾಗಿದೆ. ಇದು ಸಿದ್ಧವಾಗಲು ಯಾವ ಮುಖ್ಯ ಶಕ್ತಿಯನ್ನು ಪಡೆಯಬೇಕು? ಸಂಕಲ್ಪ, ವಾಣಿ, ಕರ್ಮ ಎಲ್ಲವೂ ಸಿದ್ಧಿಯಾಗಲು ಯಾವ ಶಕ್ತಿ ಬೇಕು? ಯಾವೆಲ್ಲಾ ಶಕ್ತಿಗಳನ್ನು ಹೇಳಿದ್ದೇವೋ ಅವು ಬೇಕು ಆದರೆ ಅದರಲ್ಲಿ ಮೊದಲು ನಿಯಂತ್ರಣ ಶಕ್ತಿ ವಿಶೇಷವಾಗಿ ಬೇಕು. ಅದಿಲ್ಲದಿದ್ದರೆ ವ್ಯರ್ಥವು ಮಿಶ್ರಣವಾಗುವುದರಿಂದ ಸಿದ್ಧಿ ಪ್ರಾಪ್ತಿಯಾಗುವುದಿಲ್ಲ. ಯಥಾರ್ಥ ಸಂಕಲ್ಪ, ವಾಣಿ ಅಥವಾ ಕರ್ಮಗಳಿದ್ದರೆ ಸಿದ್ಧಿಯಾಗದಿರಲು ಸಾಧ್ಯವಿಲ್ಲ. ಆದರೆ, ವ್ಯರ್ಥ ಮಿಶ್ರಣವಾಗುವುದರಿಂದ ಸಿದ್ಧಿಯ ಪ್ರಾಪ್ತಿಯಾಗುವುದಿಲ್ಲ. ಯಥಾರ್ಥದ ಸಿದ್ಧಿಯಾಗುತ್ತದೆ. ವ್ಯರ್ಥದ್ದಾಗುವುದಿಲ್ಲ. ವ್ಯರ್ಥವನ್ನು ನಿಯಂತ್ರಣ ಮಾಡಲಾಗುತ್ತದೆ, ಅದಕ್ಕಾಗಿ ನಿಯಂತ್ರಣಾ ಶಕ್ತಿ ಅವಶ್ಯವಾಗಿ ಬೇಕು. ಯಾವುದಾದರೊಂದು ದುರ್ಬಲತೆಯ ಕಾರಣ ನಿಯಂತ್ರಣಾ ಶಕ್ತಿಯ ಕೊರತೆ ಇದೆ. ದುರ್ಬಲತೆ ಏಕೆ ಬರುತ್ತದೆ? ತಮ್ಮ ಸಂಸ್ಕಾರಗಳನ್ನು ಅಳಿಸಲಾಗುತ್ತಿಲ್ಲ. ಈ ಸಂಕಲ್ಪ ಯಥಾರ್ಥವೇ ಅಥವಾ ಅಯಥಾರ್ಥವೇ ಎಂದು ತಿಳಿದಿದ್ದರೂ ನಿಯಂತ್ರಣಾ ಶಕ್ತಿ ಇಲ್ಲ. ನಿಯಂತ್ರಣ ಮಾಡಿದಾಗ ಅದರ ಬದಲಾಗಿ ಬೇರೆ ಸಂಸ್ಕಾರಗಳನ್ನು ಜಮಾ ಮಾಡಬಹುದು. ನಿಯಂತ್ರಣಾ ಶಕ್ತಿಯ ಕೊರತೆಯಿಂದಾಗಿ ತಮ್ಮನ್ನು ತಾವು ನಿಯಂತ್ರಣ ಮಾಡಲಾರಿರಿ. ತಮ್ಮ ರಚನೆಯ ರಚಯಿತನಾಗಲು ಬರುತ್ತದೆಯೇ? ಯಾವ ರಚನೆಯನ್ನು ರಚಿಸಬೇಕು? ಆ ಯಥಾರ್ಥ ರಚನೆಯನ್ನು ರಚಿಸುವ ಕೊರತೆಯಿದೆ. ತಾವೇ ತಮ್ಮ ರಚನೆಯಿಂದ ಬೇಸರಗೊಳ್ಳುವಂತಹ ರಚನೆಯನ್ನು ರಚಿಸುತ್ತೀರಿ. ಈಗ ಪಾಂಡವ ಸೇನೆ ಪ್ರಾಯೋಗಿಕವಾಗಿ ಯಾವ ಪ್ರಮಾಣವನ್ನು ಕೊಡಬೇಕು? ದುರ್ಬಲತೆಯ ಮಾತು, ಕರ್ಮಗಳ ಸಮಾಪ್ತಿಯ ಸಮಾರಂಭವನ್ನು ಮಾಡಬೇಕು. ಭಟ್ಟಿಯ ಸಮಾಪ್ತಿಯ ಸಮಾರಂಭವಲ್ಲ, ದುರ್ಬಲತೆಯ ಸಮಾಪ್ತಿ ಮತ್ತು ಪ್ರತಿಯೊಂದು ಸಂಕಲ್ಪ ಅದ್ಭುತವನ್ನು ತೋರಿಸುವ ರೀತಿಯಲ್ಲಿ ಶಕ್ತಿಶಾಲಿಯಾಗಿರಲಿ. ದುರ್ಬಲತೆಯ ಸ್ಥಳದಲ್ಲಿ ಅದ್ಭುತವನ್ನು ತುಂಬಬೇಕು. ದುರ್ಬಲತೆ ಎಂಬ ಶಬ್ದ ಈಗ ಶೋಭಿಸುವುದಿಲ್ಲ. ತಮ್ಮ ಮೇಲೆ ವಿಶ್ವ ಆಧಾರವಾಗಿದೆ. ವಿಶ್ವದ ಆಧಾರಮೂರ್ತಿ ಮತ್ತು ಉದ್ಧಾರಮೂರ್ತಿಗಳ ಬಾಯಲ್ಲಿ ದುರ್ಬಲತೆಯ ಶಬ್ದಗಳು ಶೋಭಿಸುವುದಿಲ್ಲ. ಈಗಂತೂ ಪ್ರತಿಯೋರ್ವ ಮೂರ್ತಿಯಿಂದ ಎಲ್ಲರಿಗೂ ಯಾವ ಸಾಕ್ಷಾತ್ಕಾರವಾಗುವುದು? (ಬಾಪ್ ದಾದಾರ), ಆ ನಶೆಯನ್ನು ನೋಡಿ ಬಲಿಹಾರಿ ಆಗುವಂತಹ ಅಲೌಕಿಕ ನಶೆ ಎಲ್ಲರ ಮೂರ್ತಿಯಲ್ಲಿ ಕಂಡುಬರಬೇಕು. ಎಲ್ಲರನ್ನೂ ಬಲಿಹಾರಿಯನ್ನಾಗಿ ಮಾಡುವಿರಾ? ಕೆಲವರಿಗೆ ಮುಕ್ತಿಧಾಮ,

ಕೆಲವರಿಗೆ ಜೀವನಮುಕ್ತಿಧಾಮದ ಮಾರ್ಗವನ್ನು ತೋರಿಸಬೇಕು ಯಾರೂ ಅವರ ಪಾತ್ರದ ಹಕ್ಕನ್ನು ತಮ್ಮಿಂದ ಪಡೆಯದೆ ಇರಬಾರದು. ಎಲ್ಲಾ ಆತ್ಮರು ತಮಗೆ ತಕ್ಕಂತಹ ಪಾತ್ರ ಮತ್ತು ತಂದೆಯ ಅಸ್ತಿ ಅವಶ್ಯ ತೆಗೆದುಕೊಳ್ಳಬೇಕು. ಯಾರೂ ತಮ್ಮ ಆಸ್ತಿಯನ್ನು ಪಡೆಯುವುದರಿಂದ ವಂಚಿತರಾಗದಂತಹ ನಶೆ ತಮ್ಮ ಮೂರ್ತಿಯಲ್ಲಿ ಇರಬೇಕು. ಈ ರೀತಿ ತಮ್ಮನ್ನು ದಾತಾನ ಮಕ್ಕಳು ದಾತಾ ಎಂದು ತಿಳಿಯಿರಿ. ನಶೆ ಮತ್ತು ಹೊಳಪು ಕೊಡುವವರಲ್ಲಿ ಇರುತ್ತದೆ. ಈಗ ಅದು ಗುಪ್ತವಾಗಿದೆ. ಆ ಸಂಸ್ಕಾರಗಳನ್ನು ಈಗ ಪ್ರಕಟ ಮಾಡಿಕೊಳ್ಳಿ. ಇನ್ನೂವರೆಗೂ ಆ ಕಾಂತಿ ಪ್ರಕಟವಾಗದಂತಹ ಯಾವ ಮಾತಿನಲ್ಲಿ ವ್ಯಸ್ತರಾಗಿದ್ದೀರಿ? ದುರ್ಬಲತೆಗಳನ್ನು ದೂರ ಮಾಡುವಲ್ಲಿ ವ್ಯಸ್ತರಾಗಿದ್ದೀರಿ. ಚುಕ್ತಾ ಅಂತೂ ಮಾಡಲೇಬೇಕು ಆದರೆ ಒಂದಾಗಿದೆ ಬೇಗನೇ ಮುಕ್ತರಾಗುವುದು, ಅದೇ ಲೆಕ್ಕ ಚುಕ್ತಾ ಆಗಲು ಕೆಲವರು 5 ನಿಮಿಷ ಇನ್ನು ಕೆಲವರು ಅರ್ಧ ಗಂಟೆ ತೆಗೆದುಕೊಳ್ಳುತ್ತಾರೆ. ಕೆಲವರು ಇಡೀ ದಿನ ಯೋಚಿಸುತ್ತಾ ಲೆಕ್ಕವನ್ನೂ ತೆಗೆಯಲಾರರು.ತಾವೆಲ್ಲಾ ವಿಶೇಷ ಆತ್ಮರು ಎಂದಾಗ ಪ್ರತಿ ಸಂಕಲ್ಪ, ಪ್ರತಿ ಕರ್ಮ ವಿಶೇಷವಾಗಿರಬೇಕು, ಅದರಿಂದ ಎಲ್ಲಾ ಆತ್ಮರಿಗೆ ಮುಂದುವರೆಯಲು ಪ್ರೇರಣೆ ಸಿಗಬೇಕು ಏಕೆಂದರೆ ತಾವೆಲ್ಲರೂ ಆಧಾರ ಮೂರ್ತಿಗಳಾಗಿದ್ದೀರಿ. ವಿಶೇಷ ಆತ್ಮರಿಗೆ ವಿಶೇಷ ಗಮನ ಕೊಡಬೇಕು. ಈಗ ಕಳೆದು ಹೋದದ್ದನ್ನು ಸಂಕಲ್ಪದಲ್ಲಿಯೂ ಪ್ರಕಟ ಮಾಡಬೇಡಿ. ಮರೆತಾದರೂ ಹಳೆಯ ಸಂಸ್ಕಾರಗಳ ವಿಷ ಪ್ರಕಟವಾದರೆ ಇದು ಈಗಿನದಲ್ಲ, ಬಹಳ ಹಿಂದಿನ ಜನ್ಮಗಳ ಸಂಸ್ಕಾರವೆಂದು ತಿಳಿಯಿರಿ. ಹಳೆಯ, ಕಳೆದು ಹೋದ ಮಾತುಗಳನ್ನು ಮತ್ತೆ ಮತ್ತೆ ಯಾರಾದರೂ ವರ್ಣನೆ ಮಾಡಿದರೆ ಅದನ್ನು ವ್ಯರ್ಥವೆಂದು ಕರೆಯಲಾಗುತ್ತದೆ. ಈ ಪಾಂಡವ ಸೇನೆಗೆ ಮೊದಲು ತಮ್ಮ ಪರಿವಾರದ ಮಧ್ಯ ಒಂದು ಉದಾಹರಣೆಯಾಗಿ ತೋರಿಸಬೇಕು, ಸಾಕಾರ ತಂದೆ ಹೇಗೆ ಉದಾಹರಣೆಯಾದರೋ ಹಾಗೆ ತಂದೆಯನ್ನು ಅನುಸರಿಸಿ. ಆದ್ದರಿಂದ ಈ ದಿನವನ್ನು ಹಳೆಯ ಸಂಸ್ಕಾರ ಮತ್ತು ಸಂಕಲ್ಪದ ಸಮಾಪ್ತಿಯ ಸಮಾರಂಭದ ದಿನವೆಂದು ತಿಳಿಯಿರಿ, ತಿಳಿಯಿತೇ?

ಈ ಗುಂಪಿನ ಹೆಸರು ಏನಾಯಿತು? ಹೆಸರನ್ನು ಕೊಡುವಾಗ ಯಾವ ಆಧಾರದ ಮೇಲೆ ಕೊಡಲಾಗುತ್ತದೆ? ಇಂದು ಯಾವ ದಿನವಾಗಿದೆ? ಬೃಹಸ್ಪತಿವಾರ(ಗುರುವಾರ), ಬೃಹಸ್ಪತಿಯ ದಶೆ ಎಂದರೆ ಸಫಲತೆ, ಹಾಗಾದರೆ ಸರ್ವರ ಸಹಯೋಗಿ, ಸಫಲತಾಮೂರ್ತಿ ಸಂಘಟನೆಯ ಗುಂಪು ಇದಾಗಿದೆ. ಯಾವಾಗಲಾದರೂ ಯಾವುದೇ ಪ್ರಕಾರದ ಸಹಯೋಗ ಯಾರಿಗಾದರೂ ಬೇಕಾದರೆ ದಾತಾನ ಮಕ್ಕಳು ಸದಾ ಕೊಡುವವರಾಗಿರುತ್ತಾರೆ. ಅವರ ಕೈಎಂದಿಗೂ ಕೊಡಲು ನಿಲ್ಲುವುದಿಲ್ಲ. ಸರ್ವರ ಸ್ನೇಹಿಯಾದಾಗಲೇ ಸರ್ವರ ಸಹಯೋಗಿಯಾಗುವಿರಿ. ಸ್ನೇಹಿಯಲ್ಲದಿದ್ದರೆ ಸರ್ವರ ಸಹಯೋಗಿಯೂ ಆಗಲಾರಿರಿ. ಆದ್ದರಿಂದ ಈ ಗುಂಪು ಮನ-ವಚನ-ಕರ್ಮ ಮತ್ತು ಸಂಬಂಧದಲ್ಲಿಯೂ ಸಹ ಸಹಯೋಗಿಯಾಗಬೇಕು ಮತ್ತು ಸಫಲತೆಯ ಮೂರ್ತಿ ಆಗಬೇಕು. ಆದ್ದರಿಂದ ಸರ್ವ ಸಹಯೋಗಿ, ಸಫಲತಾಮೂರ್ತಿ ಸಂಘಟನೆ ಎಂದು ಹೇಳಿದೆವು ತಿಳಿಯಿತೇ?

ಸರ್ವರ ಸಹಯೋಗಿಯಾಗಲು ತಮ್ಮನ್ನು ತಾವು ಅಳಿಸಿಹಾಕಬೇಕಾಗುತ್ತದೆ. ಈ ಕಾರ್ಯದಿಂದ ಹಿಮ್ಮೆಟ್ಟುವುದಿಲ್ಲ. ತಮ್ಮನ್ನು ತಾವು ಅಳಿಸಿ ಹಾಕುವುದು ಎಂದರೆ ತಮ್ಮ ಹಳೆಯ ಸಂಸ್ಕಾರಗಳನ್ನು ಅಳಿಸುವುದು, ಹಳೆಯ ಸಂಸ್ಕಾರಗಳೇ ಸರ್ವರ ಸಹಯೋಗಿಯಾಗಲು ವಿಘ್ನ ಹಾಕುತ್ತವೆ. ಆದ್ದರಿಂದ ತಮ್ಮ ಹಳೆಯ ಸಂಸ್ಕಾರಗಳನ್ನು ಅಳಿಸಬೇಕು. ಬೇರೆಯವರ ಸಂಸ್ಕಾರಗಳನ್ನು ಅಳಿಸಿಹಾಕಲು ಹೇಳುತ್ತಿಲ್ಲ. ತಮ್ಮ ಸಂಸ್ಕಾರಗಳನ್ನು ಅಳಿಸಿದಾಗ ಬೇರೆಯವರು ತಾವೇ ಅನುಸರಿಸುವರು. ನಾವು ಮತ್ತು ತಂದೆ... ಮೂರನೆಯದನ್ನು ನೋಡುತ್ತಿದ್ದರೂ ನೋಡದಂತಿರಿ, ಮೂರನೆಯದು ಬಂದಾಗ ನೋಡಿಯೂ ನೋಡದಂತಿರಿ. ತಮ್ಮನ್ನು ಮತ್ತು ತಂದೆಯನ್ನು ನೋಡಿ, "ಅಳಿಸಿ ಹೋಗುವೆವು ಆದರೆ ಸರ್ವರ ಸಹಯೋಗಿಯಾಗುವೆವು' ಎಂಬ ಸ್ಲೋಗನ್ ನೆನಪಿಟ್ಟುಕೊಳ್ಳಬೇಕು. ಕಲ್ಪದ ಹಿಂದಿನ ತಮ್ಮ ಸ್ಮೃತಿಚಿಹ್ನೆಯ ಚಿತ್ರ ನೆನಪಿದೆಯಾ? ಗೋವರ್ಧನ ಪರ್ವತದ ಸ್ಮೃತಿಚಿಹ್ನೆಯ ರೂಪವಾಗಿ ಏನು ಮಾಡುತ್ತೀರಿ ಎಂದಾದರೂ ನೋಡಿದ್ದೀರಾ? ಇತ್ತೀಚಿನ ಭಕ್ತಿಮಾರ್ಗದಲ್ಲಿ ಗೋವರ್ಧನ ಪೂಜೆ ಮಾಡುವಾಗ ಏನನ್ನು ಮಾಡುತ್ತಾರೆ? ಬೆಟ್ಟಕ್ಕೆ ಬೆರಳು ಕೊಡುವುದರ ಅರ್ಥವಾಗಿದೆ ಹಳೆಯ ಸಂಸ್ಕಾರಗಳನ್ನು ಅಳಿಸಲು ಬೆರಳು ಕೊಡುವುದು. ಮೊದಲು ಬೆಟ್ಟವನ್ನು ಎತ್ತಬೇಕು. ಆಗ ಈ ಕಲಿಯುಗೀ ಪ್ರಪಂಚ ಬದಲಾಗಿ ಹೊಸ ಪ್ರಪಂಚವಾಗುವುದು. ಯಾವುದೇ ಸ್ಲೋಗನ್ ನೆನಪಿನಲ್ಲಿಡಿ, ಆದರೆ ಅದರ

ಸ್ವರೂಪವಾಗಬೇಕು. ಇದೊಂದು ಸಾಧನವಾಗಿದೆ ಆದರೆ ಸಾಧನೆಯಿಂದ ಸ್ವರೂಪವಾಗುವುದು ಚೆನ್ನಾಗಿರುತ್ತದೆ. ಯಾವ ವಿಶೇಷತೆಯಿಂದ ಮಾಲೆಯ ಮಣಿಯಾಗುತ್ತಾರೆ? ಏಕಮತವಾಗಿ ಒಂದೇ ದಾರದಲ್ಲಿ ಪೋಣಿಸಲ್ಪಡುವುದು ಮಣಿಗಳ ವಿಶೇಷತೆಯಾಗಿದೆ. ಒಬ್ಬನ ನೆನಪು, ಏಕರಸ ಸ್ಥಿತಿ ಮತ್ತು ಏಕಮತ ಎಲ್ಲವೂ ಒಂದು. ಒಂದೇ ತರಹದ ಮಣಿಗಳು ಒಂದೇ ದಾರದಲ್ಲಿ ಪೋಣಿಸಲ್ಪಡುತ್ತವೆಯಲ್ಲವೇ? ಒಂದೇ ಮತದಂತೆ ನಡೆಯುವವರ ಪರಸ್ಪರರ ಮತ ಒಂದೇ ಆಗಿರಬೇಕು. ಸಂಕಲ್ಪವೂ ಒಬ್ಬನ ಪ್ರತಿ. ಎರಡು ಮತಗಳಿದ್ದರೆ ಅವರು ಬೇರೆ. ಅವರು 16000 ಮಾಲೆಯ ಮಣಿಯಾಗುತ್ತಾರೆ. ಒಂದು ಮತಕ್ಕಾಗಿ ಅಂತಹ ವಾತಾವರಣ ಮಾಡಬೇಕು. ವಾತಾವರಣ ಅಳವಡಿಸುವ ಶಕ್ತಿಯಿದ್ದಾಗ ತಯಾರಾಗುವುದು. ಯಥಾಶಕ್ತಿ, ಯಥಾಯೋಗ್ಯತೆ ಇರುವುದರಿಂದ ಯಾವುದೇ ಮಾತಿನಲ್ಲಿ ಭಿನ್ನತೆಯಿದ್ದಾಗ ಅದನ್ನು ಸಮಾವೇಶಗೊಳಿಸಿಕೊಳ್ಳಿ. ಆದ್ದರಿಂದ ಈ ರೀತಿಯ ಪರಸ್ಪರರ ಏಕತೆಯಿಂದಲೇ ಸಮೀಪ ಬರುವಿರಿ. ಎಲ್ಲರ ಮುಂದೆ ದೃಷ್ಟಾಂತವಾಗುವಿರಿ. ಎಲ್ಲರಲ್ಲಿ ತಮ್ಮ ತಮ್ಮ ವಿಶೇಷತೆಯಿರುತ್ತದೆ. **ಯಾರೇ ಇರಲಿ ಅವರ ವಿಶೇಷತೆಗಳನ್ನು ನೋಡಿ ಆಗ ವಿಶೇಷ ಆತ್ಮವಾಗುವಿರಿ, ಕೊರತೆಯನ್ನು ನೋಡಲೇಬಾರದು, ಸೂರ್ಯ ಮತ್ತು ಚಂದ್ರರಿಗೆ ಗ್ರಹಣ ಹಿಡಿದಾಗ ನೋಡಿದರೆ ದುರ್ದಶೆಯಾಗುವುದು ಎಂದು ಹೇಳುತ್ತಾರೆ. ಅದೇ ರೀತಿ ಬೇರೆ ಯವರ ಕೊರತೆ ಗ್ರಹಣದಂತೆ, ತಪ್ಪಿಯೂ ಯಾರಾದರೂ ನೋಡಿದರೆ ದುರ್ದಶೆಯಾಗುವುದು ಎಂದು ತಿಳಿಯಿರಿ. ಆದ್ದರಿಂದ ಚೊಕ್ಕ ಚೆನ್ನವಾಗಬೇಕು. ಸ್ವಲ್ಪ ಮಿಶ್ರಣವಾದರೂ ಅದೇ ಕಂಡು ಬರುವುದು ಮತ್ತು ವಿಶೇಷತೆಗಳನ್ನು ಹತ್ತಿಕ್ಕುವುದು, ಬೇರೆಯವರ ಮೇಲೆ ಪ್ರಭಾವವಾಗುವ ರೀತಿ ತಮ್ಮನ್ನು ಪರಿವರ್ತಿಸಿಕೊಳ್ಳಿ.** ಒಂದೇ ಪೆಟ್ಟಿಗೆ ಪರಿವರ್ತನೆಯಾಗಬೇಕು. ಒಮ್ಮೆಲೇ ಅತೀತರಾಗಿ ಆಗ ಬೇರೆಯವರ ಬಗೆಗಿರುವ ಸೆಳೆತ ತಾನೇ ತೊಲಗಿ ಹೋಗುವುದು. ಒಳ್ಳೆಯದು.

ಅವ್ಯಕ್ತ ಮುರಳಿ 30-07-1970.

***ಮಹಾರಥಿ ಎಂದರೆ ಮಹಾನತೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ಸಂಕಲ್ಪ ಮತ್ತು ಕರ್ಮ ಸಮಾನವಾಗಿರುವ ಮಹಾರಥಿಯಾಗಿದ್ದೇನೆ.

2. ನಾನು ನಿಯಂತ್ರಣಾ ಶಕ್ತಿಯಿಂದ ಯೋಗ ಸ್ಥಿತಿಯನ್ನು, ಕರ್ಮ ಸಿದ್ಧಿಯನ್ನು ಪಡೆದಿರುವ ಅಂತಿಮ ಸ್ಥಿತಿ ಸ್ವರೂಪ.

3. ನಾನು ದುರ್ಬಲತೆಗಳನ್ನೆಲ್ಲಾ ಸಮಾಪ್ತಿ ಮಾಡಿ ಶಕ್ತಿಶಾಲಿ ಸಂಕಲ್ಪದಿಂದ ಅದ್ಭುತ ಮಾಡಿರುವ ಸಾಕ್ಷಾತ್ಕಾರ ಮೂರ್ತಿ.

4. ನಾನು ಸರ್ವರಿಗೂ ಅವರ ಯತಾರ್ಥ ಪಾತ್ರವನ್ನು ಮತ್ತು ತಂದೆಯ ವಾರಸತ್ವವನ್ನು ಕೊಟ್ಟು, ಎಲ್ಲರಿಗೂ ಮುಕ್ತಿ ಮತ್ತು ಜೀವನ್ ಮುಕ್ತಿಧಾಮದ ಮಾರ್ಗವನ್ನು ತೋರಿಸಿದ್ದೇನೆ.

5. ವಿಶೇಷಾತ್ಮನಾದ ನಾನು ವಿಶೇಷ ಗಮನವಿಟ್ಟು ಹಳೆಯ ಸಂಸ್ಕಾರ ಮತ್ತು ಸಂಕಲ್ಪಗಳ ಸಮಾಪ್ತಿ ಸಮಾರಂಭವನ್ನು ಆಚರಿಸಿಕೊಂಡಿದ್ದೇನೆ.

6. ನಾನು ಸರ್ವರಿಗೆ ಮನಸಾ, ವಾಚಾ, ಕರ್ಮಣಾ, ಸಂಬಂಧಗಳಲ್ಲಿ ಸ್ನೇಹ ಮತ್ತು ಸಹಯೋಗಿಯಾಗಿರುವ ಸಫಲತಾ ಮೂರ್ತಿ.

7. ನಾನು "ಅಳಿಸಿ ಹಾಕುತ್ತೇನೆ ಆದರೆ ಎಲ್ಲರಿಗೂ ಸಹಯೋಗಿ" ಎಂಬ ಸ್ಲೋಗನ್ನಿನ ಸ್ಮೃತಿ ಸ್ವರೂಪ.

8. ನಾನು ನನ್ನ ಹಳೆಯ ಸಂಸ್ಕಾರಗಳನ್ನು ತೊಲಗಿಸುವುದರೊಂದಿಗೆ ಈ ಕಲಿಯುಗೀ ಪರ್ವತವನ್ನು ಎತ್ತಲು ಸಹಯೋಗ ಎಂಬ ಬೆರಳನ್ನು ಕೊಟ್ಟಿದ್ದೇನೆ.

9. ನಾನು ಒಂದೇ ಸಂಲಗ್ನತೆ, ಏಕರಸಸ್ಥಿತಿ, ಏಕಮತದ ಮೇಲೆ ನಡೆಯುವ ನಂಬರ್ ಒನ್ ವಿದ್ಯಾರ್ಥಿ.

10. ನಾನು ಭಿನ್ನತೆಯನ್ನು ಸಮಾಪ್ತಿ ಮಾಡಿ ಏಕತೆಯಿಂದ ಎಲ್ಲರನ್ನೂ ಸಮೀಪಕ್ಕೆ ತಂದಿರುವ ಉದಾಹರಣಾಮೂರ್ತಿ.

11. ನಾನು ಸರ್ವರ ವಿಶೇಷತೆಯನ್ನು ನೋಡುವ ವಿಶೇಷ ಆತ್ಮ.

12. ನನ್ನ ಪರಿವರ್ತನೆಯ ಪ್ರಭಾವಕ ಒಂದೇ ಪೆಟ್ಟಿಗೆ ಇತರರನ್ನು ಪರಿವರ್ತನೆ ಮಾಡುತ್ತದೆ.

13. ನಾನು ಅತೀತವಾಗಿ ಇತರರ ಸೆಳೆತವನ್ನು ಸ್ವತಹವಾಗಿ ತೊಲಗಿಸಿದ್ದೇನೆ.